**ಇಂದು ದಿನಾಂಕ 06.08.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ವಾಟೀ ಸವಾಲುಃ ಶ್ರೀ ಕೆ ಪಿ ಪ್ರತಿವಾದಿ ಪರ ವಕೀಲರಿಂದಃ**

2. ನಾನು 8 ನೇ ತರಗತಿವರೆಗೆ ಓದಿದ್ದೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ ಮತ್ತು ಪಿಜಿಗಳಿಗೆ ಮನೆಯನ್ನು ಬಾಡಿಗೆ ಕೊಟ್ಟಿದ್ದೇನೆ.

3. ಕರಾರು ಮಾಡಿಕೊಟ್ಟ ನಾಲ್ಕು ತಿಂಗಳಲ್ಲಿ ಕ್ರಯ ಪತ್ರವನ್ನು ಮಾಡಿಕೊಡಲಾರದ ಕಾರಣವೆಂದರೆ ಸದರಿ ಮಾರಾಟಗಾರರು ಪೋಡಿ ಮಾಡಿಸಿ ಸದರಿ ಕ್ರಯ ಪತ್ರ ಮಾಡಿಕೊಡುತ್ತೇವೆ ಎಂದರು ಹೇಳಿರುವ ಕಾರಣ ವಿಳಂಬವಾಗಿದೆ ಎಂದು ಹೇಳುತ್ತಾರೆ. ಈ ರೀತಿ ನಾಲ್ಕು ತಿಂಗಳಕ್ಕೆ ಲಿಖಿತವಾಗಿ ನೋಟಿಸನ್ನು ಕೊಟ್ಟಿದ್ದಿರಾ ಎಂದರೆ ಮೌಖಿಕವಾಗಿ ಕೇಳಿದ್ದೇವೆ ಎಂದು ಹೇಳುತ್ತಾರೆ. ನಾಲ್ಕು ತಿಂಗಳಲ್ಲಿ ಖರೀದಿ ಕ್ರಯ ಪತ್ರ ಮಾಡಿಸಿಕೊಳ್ಳಲಾಗದ ಕಾರಣವೆಂದರೆ ನಮ್ಮ ಹತ್ತಿರ ಮಿಕ್ಕಿದ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹತ್ತಿರ ಹಣವಿತ್ತು ಎಂದು ತೋರಿಸಲು ಬ್ಯಾಂಕ್ ದಾಖಲೆ ಹಾಜರು ಪಡಿಸಿರುತ್ತೇನೆ.

4. ಪುನಃ 2018 ರಲ್ಲಿ 30 ಲಕ್ಷ ರೂಪಾಯಿಗಳು ಕೊಟ್ಟಿರುತ್ತೇನೆ ಕಾರಣ ರಾಜಕುಮಾರ ಮತ್ತು ಮಕ್ಕಳು ಪೋಡಿ ಮಾಡಿಸಿ ಕ್ರಯ ಪತ್ರವನ್ನು ಮಾಡಿಕೊಡುತ್ತೇವೆ ಎಂದು ಹೇಳಿರುವ ಕಾರಣ ಸದರಿ ಮೊತ್ತವನ್ನು ಕೊಟ್ಟಿರುತ್ತೇನೆ. ಈ ರೀತಿ ಪೋಡಿ ಮಾಡಲು 30 ಲಕ್ಷ ರೂಪಾಯಿಗಳು ತೆಗೆದು ಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. 2017 ನೇ ಇಸವಿಯಲ್ಲಿ ಪ್ರತಿವಾದಿಗೆ ಹಣದ ಅವಶ್ಯಕತೆ ಇರುವ ಕಾರಣ ಜಮೀನನ್ನು ಮಾರಾಟ ಮಾಡಲು ಒಪ್ಪಿ ಕರಾರು ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ನಿಜ. ಪೋಡಿ ಮತ್ತು ದುರಸ್ಥಿಯನ್ನು ಮಾಡಿಸುವ ಜವಾಬ್ದಾರಿ ನನ್ನ ಮೇಲೆ ಇರುತ್ತದೆ ಎಂದರೆ ಸಾಕ್ಷಿದಾರರು ಅವರ ಜಮೀನಿನ ಜವಾಬ್ದಾರಿ ನಮ್ಮ ಮೇಲೆ ಇರುವುದಿಲ್ಲ ಎಂದು ಹೇಳುತ್ತಾರೆ.

6. ನಮ್ಮ ವಕೀಲರು ನಮ್ಮ ಮಾಹಿತಿಯ ಮೇರೆಗೆ ಪ್ರತಿವಾದಿಗೆ ನೋಟಿಸನ್ನು ಕಳುಹಿಸಿ ಕೊಟ್ಟಿದ್ದಾರೆ ಎಂದರೆ ನಿಜ. ನಾವುಗಳು ಪ್ರತಿವಾದಿಗಳು ಪ್ರತ್ಯುತ್ತರ ನೀಡಿದ್ದರು ಸಹ ಸುಮ್ಮನಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಪೋಡಿ ಮಾಡಿಸಿಕೊಂಡು ಬಂದರೆ ಕ್ರಯಕ್ಕೆ ಪಡೆಯಲು

ಈಗಲೂ ಸಿದ್ಧನಾಗಿದ್ದೇವೆ ಎನ್ನುತ್ತಾರೆ. 2023 ನೇ ಇಸವಿಯಲ್ಲಿ ಮತ್ತೊಂದು ನೋಟಿಸನ್ನು ಕೊಟ್ಟಿದ್ದೇವೆ ಎಂದರೆ ನಿಜ, ದಿನಾಂಕ ಅಷ್ಟೊಂದು ನೆನಪಿಲ್ಲ. ನಾನು 3 ಬಾರಿ ನೋಟಿಸು ಕಳುಹಿಸುವಾಗ ಮತ್ತು ಈ ದಾವೆಯನ್ನು ಹೂಡುವಾಗ ಮಿಕ್ಕಿದ ಪ್ರತಿಫಲವನ್ನು ಕೊಡುವ ಸಾಮರ್ಥ್ಯವಿರಲಿಲ್ಲ ಎಂದರೆ ಸರಿಯಲ್ಲ. ಈ ರೀತಿ ದುಡ್ಡು ಇಲ್ಲದಿದ್ದರೂ ಸಹ ನಾನು ಸ್ವಲ್ಪ ಮೊತ್ತಕ್ಕೆ ಕರಾರನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆರ್ಥಿಕ ಅಡಚಣೆ ಸಲುವಾಗಿ ಮಾರಾಟ ಮಾಡಲಡು ಒಪ್ಪಿದ್ದು ನಾನು ಇವತ್ತಿಗೂ ಸಹ ಮಿಕ್ಕಿದ ಪ್ರತಿಫಲ ಕೊಡಲಾರದ ಕಾರಣ ಅವರ ಆರ್ಥಿಕ ಅಡಚಣೆ ಹಾಗೇ ಉಳಿದ್ದಿತ್ತು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**